ಸಹ ಸಪ್ಲೈ ಮಾಡಬೇಕೆಂದು ಕೇಳಿದ್ದಾರೆ. ಆದರೆ ಇತ್ತೀನವರೆಗೆ ಸಪ್ಲೈ ಆರ್ಡರ್ಸ್ ಸಹ ಬಂದಿಲ್ಲ. ತಾವು ಅನ್ ಎಂಪ್ಲಾಯಿಡ್ ಗ್ರಾಜುಯೇಟ್ಸ್‌ನಿಂದ ಅರ್ಜಿ ಬಂದರೆ ಕನ್‌ಸಿಡರ್ ಮಾಡುತ್ತೀರ ಎಂದು ಕೇಳಿದ್ದೀರಿ. ಅಂಥ ಯಾವುದಾದರೂ ಅಪ್ಲಿಕೇಷನ್ ಬಂದರೆ ನಾವು ಕನ್‌ಸಿಡರ್ ಮಾಡಿ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ವಿಷಯ:- ರಾಜ್ಯದಲ್ಲಿರುವ ಚರ್ಮ ಕೈಗಾರಿಕೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 474 (2024)

ಶ್ರೀ ಕೆ.ಹರ್ಷಕುಮಾರಗೌಡ (ಚಾಮರಾಜ):- ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ ರಾಜ್ಯದಲ್ಲಿ ಉತ್ಪಾದಿಸಲ್ಪಡುವ ಚರ್ಮವನ್ನು ಹದ ಮಾಡಲು ನಮ್ಮಲ್ಲಿರುವ ಉದ್ಯಮಗಳ ಸಂಖ್ಯೆ ಎಷ್ಟು?

ಆ ಪ್ರತಿ ವರ್ಷ ಎಷ್ಟು ಬೆಲೆಯ ಚರ್ಮವು ನಮ್ಮ ರಾಜ್ಯದಲ್ಲಿ ಹದಮಾಡಲ್ಪಡುತ್ತದೆ ?

ಇ ನಮ್ಮ ರಾಜ್ಯದಿಂದ ಹೊರ ರಾಜ್ಯಕ್ಕೆ ಪ್ರತಿವರ್ಷ ಎಷ್ಟು ಬೆಲೆಯ ಚರ್ಮವನ್ನು ರಫ್ತು ಮಾಡಲ್ಪಡುತ್ತದೆ ಮತ್ತು ಇದನ್ನು ಖರೀದಿಸುವ ಪ್ರಮುಖ ಹೊರ ರಾಜ್ಯಗಳಾವುವು ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು)

ಅ 15

ಆ ಅಂದಾಜು 22.60 ಕೋಟಿ ರೂಪಾಯಿಗಳು.

ಇ ಅಂದಾಜು 41.00 ಕೋಟಿ ರೂಪಾಯಿಗಳು ತಮಿಳುನಾಡು ಹೆಚ್ಚು ಖರೀದಿಸುತ್ತದೆ.

ಶ್ರೀ ಕೆ.ಹರ್ಷಕುಮಾರಗೌಡ:- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಕೈಗಾರಿಕಾ ಮಂತ್ರಿಗಳು ಕರ್ನಾಟಕದಲ್ಲಿ ಚರ್ಮ ಹದಮಾಡುವ ಕೈಗಾರಿಕೆಗಳು ಎಷ್ಟಿವೆ ಎಂದು ಕೇಳಿರುವುದಕ್ಕೆ 15 ಎಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಈ ಒಂದು ಚರ್ಮ ಹದಮಾಡುವುದರಿಂದ ಎಷ್ಟು ಹಣ ಬರುತ್ತಿದೆ ಎಂಬುದಕ್ಕೆ 20ಕೋಟಿ ರೂಪಾಯಿಗಳು ಎಂದು ಅಂದಾಜು ಹೇಳಿದ್ದಾರೆ. ಹೊರರಾಜ್ಯಗಳಿಗೆ ಎಷ್ಟು ಕೋಟಿ ರೂಪಾಯಿಗಳ ಚರ್ಮ ಮಾರಾಟ ರಫ್ತು ಆಗುತ್ತಿದೆ ಎಂದು ಕೇಳಿರುವುದಕ್ಕೆ 40 ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ. ತಮ್ಮ ಮೂಲಕ ನಾನು ಕೈಗಾರಿಕಾ ಮಂತ್ರಿಗಳನ್ನು ಕೇಳುತ್ತೇನೆ. ಹೊರರಾಜ್ಯಗಳಿಗೆ ಏನೊಂದು ಚರ್ಮ ರಫ್ತಾಗುತ್ತಿದೆ, ಆದರಿಂದ ಸಿದ್ಧಪಡಿಸಿದ ಸರಕನ್ನು ನಮ್ಮ ರಾಜ್ಯಕ್ಕೆ ತಾವು ಆಮದು ಮಾಡಿಕೊಳ್ಳುವ ಮೂಲಕ ಸುಮಾರು 100 ಕೋಟಿ ರೂಪಾಯಿಗಳಷ್ಟು ಆದಾಯದಿಂದ ಕರ್ನಾಟಕ ರಾಜ್ಯವು ವಂಚಿತವಾಗುವುದಿಲ್ಲವೇ ? ಕರ್ನಾಟಕ ರಾಜ್ಯದಲ್ಲಿ ಚರ್ಮ ಹದಮಾಡುವ ಸರ್ಕಾರಿ ಸ್ವಾಮ್ಯದ ಒಂದು ಉದ್ಯಮ ಇತ್ತು. ಅದನ್ನು ಮುಚ್ಚಿದ ಉದ್ದೇಶವೇನು ? ಅದನ್ನು ಪುನ: ಪ್ರಾರಂಭ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೆ?

ಶ್ರೀ ನಜೀರ್ ಅಹಮದ್:- ಈಗಾಗಲೇ ನಾನು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ. ನಮ್ಮ ರಾಜ್ಯದಲ್ಲಿ ಸುಮಾರು 48ಲಕ್ಷ ಟನ್ ಚರ್ಮ ಒಂದು ವರ್ಷಕ್ಕೆ ಬರುತ್ತಿದೆ. ಅದರಲ್ಲಿ ಶೇಕಡ 70 ರಷ್ಟು ತಮಿಳ್ನಾಡಿಗೆ ಹೊಗುತ್ತಿದೆ. ಕಾರಣ, ಅಲ್ಲಿ ಟ್ಯಾನಿಂಗ್ ಫಿಸಿಲಿಟೀಸ್ ಜಾಸ್ತಿ ಇದೆ. ಲೇಟೆಸ್ಟ್ ಟೆಕ್ನಾಲಜಿ ಯೂಸ್ ಮಾಡಿ ಟ್ಯಾನಿಂಗ್ ಫೆಸಿಲಿಟೀಸ್ ಜಾಸ್ತಿ ಇರುವುದರಿಂದ ಅಲ್ಲಿಗೆ ಹೋಗುತ್ತಿದೆ. ನಮ್ಮ ರಾಜ್ಯದಿಂದ ಹೆಚ್ಚಿನ ಪ್ರಮಾಣದಲ್ಲಿ ಚರ್ಮ ಎಕ್ಸ್‌ಪೋರ್ಟ್ ಆಗುತ್ತಿದೆ ಎಂದು ಹರ್ಷಕುಮಾರಗೌಡರ ಗಮನಕ್ಕೆ ತರಬಯಸುತ್ತೇನೆ. ಇವತ್ತಿನ ದಿವಸ ರಾಜ್ಯದಲ್ಲಿ ಹಲವಾರು ಜನರು ಗಾರ್ಮೆಂಟ್ಸ್ ಇಂಡಸ್ಟ್ರೀಸ್ ಓಪನ್ ಮಾಡಲಿಕ್ಕೆ ಮುಂದೆ ಬಂದಿದ್ದಾರೆ. ಬೆಂಗಳೂರಿನಲ್ಲಿ ಮಾತ್ರವಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿ ಸಾಗರ ಅಂಥ ಜಾಗದಲ್ಲಿ ಈ ಆಕ್ಟಿವಿಟೀಸ್ ಹೆಚ್ಚಾಗಿ ನಡೆಯುತ್ತಿದೆ.

ಶ್ರೀ ಕೆ. ಹರ್ಷಕುಮಾರ ಗೌಡ:- ಮಾನ್ಯ ಮಂತ್ರಿಗಳು, ಟ್ಯಾನಿಂಗ್ ಫೆಸಿಲಿಟೀಸ್ ತಮಿಳ್ನಾಡಿನಲ್ಲಿ ಹೆಚ್ಚಿಗೆ ಇದೆ, ನಮ್ಮಲ್ಲಿ ಕಡಿಮೆ ಇದೆ ಎಂದು ಹೇಳಿದರು. ಅಲ್ಲದೆ, ಸಿದ್ಧಪಿಡಿಸಿದ ಉಡುಪುಗಳನ್ನು ರಫ್ತು ಮಾಡುವುದರಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕ ನಂ.1 ಎಂದು ಹೇಳಿದ್ದಾರೆ. ಆ ಚರ್ಮವನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಹದ ಮಾಡುವುದಕ್ಕೆ ಸಾಧ್ಯವಿಲ್ಲವೆ? ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ. ಅವರು ಬಹಳ ಉತ್ಸಾಹದಿಂದ ವಿಶ್ವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಕರ್ನಾಟಕ ರಾಜ್ಯ ಏನು ಕೈಗಾರಿಕಾ ಸಾಮರ್ಥ್ಯ ಪಡೆಯಬೇಕಾಗಿತ್ತು, ಇದರಿಂದ ವಂಚಿತವಾಗಿದೆಯಲ್ಲ, ಅದು ವಿಶ್ವ ಕಾರ್ಯಕ್ರಮಕ್ಕೆ ಧಕ್ಕೆಯಾಗುವುದಿಲ್ಲವೆ ? ಆ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದಕ್ಕೆ ತಮ್ಮ ಇಲಾಖೆ ಏನು ಮಾಡುತ್ತದೆ ?

ಶ್ರೀ ನಜೀರ್ ಅಹಮದ್:- ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ನನ್ನ ಇಲಾಖೆಯ ಬೇಡಿಕೆಯಲ್ಲೂ ಸಹ ಈ ಒಂದು ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಲಿಡ್ಕರ್ ಸ್ಥಾಪನೆಯಾಗಿ ಸುಮಾರು 15-20 ವರ್ಷಗಳಾದರೂ ಅದರಲ್ಲಿ ಕೆಲಸ ಮಾಡತಕ್ಕ ಬೆನಿಫಿಷರೀಸ್ 14 ಸಾವಿರ ಜನರಿದ್ದರು. ಈ ವಿಶ್ವ ಯೋಜನೆಯಲ್ಲಿ 3 ವರ್ಷದಲ್ಲಿ ನಾವು 22,500 ಜನರನ್ನು ಲಿಡ್ಕರ್ ವ್ಯಾಪ್ತಿಯಲ್ಲಿ ತರಬೇಕೆಂದು ಸರ್ಕಾರ ಯೋಜನೆ ಹಾಕಿಕೊಂಡಿದೆ. ಇದರ ಮೂಲಕ ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ಹಲವಾರು ಈ ಚರ್ಮದ ಚಪ್ಪಲಿ, ಗಾರ್ಮೆಂಟ್ಸ್, ಲೇಡೀಸ್ ಪರ್ಸ್ ಇವುಗಳನ್ನು ತಯಾರಿಸಲು ಶುರು ಮಾಡಿದ್ದಾರೆ. ಅವುಗಳ ಎಕ್ಸ್‌ಪೋರ್ಟಿಗೆ ಒಳ್ಳೆಯ ರೀತಿಯಲ್ಲಿ ಆರ್ಡರ್ ಸಿಕ್ಕಿದೆ. ಅದನ್ನು ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. ಇದು ಹೆಚ್ಚಿನ ರೀತಿಯಲ್ಲಿ ಬರುವ ಹಾಗೆ ಸೆಕೆಂಡ್ ಫೇಸ್‌ನಲ್ಲಿ ನೂರಕ್ಕೂ ಹೆಚ್ಚು ಸ್ಥಳಗಳಲ್ಲಿ ಲೆದರ್ ಆಕ್ಟಿವಿಟೀಸ್ ಶುರುಮಾಡುತ್ತಿದ್ದೇವೆ.

ಶ್ರೀ ಸಾದತ್ ಅಲಿ ಖಾನ್:- ಮಾನ್ಯ ಮಂತ್ರಿಗಳು ಸುಮಾರು 70-80 ಪರ್ಸೆಂಟ್ ಸ್ಕಿನ್ ಟ್ಯಾನಿಂಗ್‌ಗೆ ಇಲ್ಲಿಂದ ತಮಿಳ್ನಾಡಿಗೆ ಹೋಗುತ್ತಿದೆ ಎಂದು ಹೇಳಿದರು. ಕರ್ನಾಟಕ ರಾಜ್ಯದಲ್ಲಿ ಈಗ ಟ್ಯಾನಿಂಗ್ ಇಂಡಸ್ಟ್ರೀಸ್‌ಗೆ ಏನಾದರೂ ಫೆಸಿಲಿಟೀಸ್ ಕೊಡುತ್ತಿದ್ದೀರಾ ? ಟ್ಯಾನಿಂಗ್ ಇಂಡಸ್ಟ್ರೀಸ್ ಪ್ರಾರಂಭ ಮಾಡಲು ಯಾರು ಯಾರು ಅಪ್ಲೈ ಮಾಡಿದ್ದಾರೆ ?

ಶ್ರೀ ನಜೀರ್ ಅಹಮದ್:- ಇದಕ್ಕೆ ಪ್ರತ್ಯೇಕವಾಗಿ ಯಾವುದೇ ಒಂದು ಫೆಸಿಲಿಟೀಸ್ ಎಂದು ಮಾಡಿಲ್ಲ. ಒಂದು ಜಾಗವನ್ನು ಕಾರ್ಪೊರೇಷನ್ ಮುಖಾಂತರ ಕೊಟ್ಟು ಅಂದರೆ ಕಾಡುಗೊಂಡನಹಳ್ಳಿ, ಟ್ಯಾನರಿ ರೋಡ್ ಎಂದು ಏನಿದೆ ಅದರ ಮುಂದೆ ಒಂದು ಜಾಗವನ್ನು ನಿಗದಿ ಮಾಡಿದ್ದಾರೆ. ಟ್ಯಾನಿಂಗ್ ಯೂನಿಟ್ಸ್ ಎಲ್ಲಾ ಅಲ್ಲಿ ಕಾನ್‌ಸೆಂಟ್ರೇಟ್ ಆಗಿದೆ. ಹೆಚ್ಚಾಗಿ ಇಲ್ಲಿ ಸೆಕ್ಸೆಸ್‌ಫುಲ್ ಆಗಿಲ್ಲ. ಸುಮಾರು 15 ಯೂನಿಟ್ಸ್ ಇದ್ದರೆ ಅದರಲ್ಲಿ 8 ಸಿಕ್ ಆಗಿದೆ. ಕಾರಣ ಇಲ್ಲಿ ಲೆಟೆಸ್ಟ್ ಫೆಸಿಲಿಟೀಸ್ ಇಲ್ಲ ಮತ್ತು ಲೇಬರ್ ಇಲ್ಲ. ಪರ್ಟಿಕ್ಯುಲರ್ ಮ್ಯಾನ್ ಪವರ್ ಹೆಚ್ಚಾಗಿ ತಮಿಳುನಾಡಿನಲ್ಲಿರುವುದರಿಂದ ಕಾನ್‌ಸೆಂಟ್ರೇಷನ್ ಆಸ್ತಿ ಆಲ್ಲಾಗಿದೆ.

ಶ್ರೀ ಪೆರಿಕಲ್.ಎಂ.ಮಲ್ಲಪ್ಪ:- ಮಾನ್ಯ ಸಭಾಧ್ಯಕ್ಷರೆ, ಮಂತ್ರಿಮಹೋದಯರು ಹೇಳಿದರು. ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ ಎಂದು ಒಂದು ಕಂಪೆನಿ ಇದೆ. ಅದು ಪಬ್ಲಿಕ್ ಸೆಕ್ಟಾರ್ ಕಂಪೆನಿ. ಅದು ಮಂತ್ರಿಗಳ ಗಮನಕ್ಕೆ ಬಂದಿದೆಯೆ? ಕ್ರೋಮ್ ಟ್ಯಾನಿಂಗ್ ಕಂಪನಿಯಲ್ಲಿ ಚರ್ಮವನ್ನು ಹದ ಮಾಡುವುದೇ ಅವರ ಕೆಲಸ. ಅದು ಬಹಳ ಹಳೇ ಕಂಪನಿ ಕರ್ನಾಟಕದಲ್ಲಿದೆ. ಕ್ರೋಮ್ ಟ್ಯಾನಿಂಗ್‌ನಲ್ಲಿ ಚರ್ಮ ಏನು ಹದಮಾಡುತ್ತಾರೆ ಅದನ್ನು ಲಿಡ್‌ಕರ್ ಕಂಪನಿಯವರು ತೆಗೆದುಕೊಂಡು ಅವರು ವ್ಯಾನಿಟಿ ಬ್ಯಾಗ್‌ಗಳು, ಚಪ್ಪಲಿಗಳು, ಸೂಟ್‌ಕೇಸ್‌ಗಳನ್ನು ಮಾಡುತ್ತಾರೆ. ಆದರೆ ಇಲ್ಲಿ ನಮ್ಮ ಸರ್ಕಾರದ ಪಬ್ಲಿಕ್ ಸೆಕ್ಟಾರ್ ಕಂಪನಿ ಕ್ರೋಮ್ ಟ್ಯಾನಿಂಗ್ ಇಟ್ಟುಕೊಂಡು75-80 ಪರ್ಸೆಂಟ್ ಪಕ್ಕದ ನೆರೆಹೊರೆಯ ರಾಜ್ಯಗಳಿಗೆ ಟ್ಯಾನಿಂಗ್ ಮಾಡುವುದಕ್ಕೆ ಹೋಗುತ್ತದೆ ಎಂದರೆ ಕ್ರೋಮ್ ಟ್ಯಾನಿಂಗ್ ಕಂಪೆನಿಯ ಆಡಳಿತ ಸುಧಾರಣೆ ಮಾಡಿ ಇಲ್ಲೇ ಚರ್ಮ ಹದ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಮತ್ತು ಲಿಡ್ಕರ್‌ನಲ್ಲಿ ಮಾಡುವ ಪ್ರಾಡಕ್ಟ್‌ನ್ನು ವಿಶ್ವ

ಲೇಬಲ್ ಹಾಕಿ ಮಾರುತ್ತಿದ್ದಾರೆ. ಈ ತರಹ ಮಾರುವುದರಿಂದ ಪ್ಯಾರಲಲ್ ಆರ್ಗನೈಸೇಷನ್ ಶುರುವಾಗಿ ಪ್ರಾಡಕ್ಟ್ ಕಾಸ್ಟ್ ಜಾಸ್ತಿಯಾಗುವುದಿಲ್ಲವೇ ? ಕ್ರೋಂ ಟ್ಯಾನಿಂಗ್‌ನಿಂದ ಲೆದರ್ ತೆಗೆದುಕೊಂಡು ಲಿಡ್ಕರ್‌ಗೆ ಕೊಡುವುದು, ಅದೇ ಕಂಪನಿ ಬೇರೆ ಇದೇ ಕಂಪನಿ ಬೇರೆ. ಲಿಡ್ಕರ್‌ನಲ್ಲಿ ಮಾಡುವುದನ್ನು ವಿಶ್ವ ಎಂದು ಹಾಕಿ ಮತ್ತೆ ಅದನ್ನು ಮಾರುವುದು, ಈ ತರಹ ಆರ್ಗನೈಸೇಷನ್ ಕ್ರಿಯೇಟ್ ಮಾಡಿಕೊಂಡು ಹೋದರೆ ಪ್ರಾಡಕ್ಟ್ ಕಾಸ್ಟ್ ಜಾಸ್ತಿಯಾಗುತ್ತದೆ. ಆದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದು ಅವರ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ನಜೀರ್ ಅಹಮದ್:- ಸನ್ಮಾನ್ಯ ಅಧ್ಯಕ್ಷೆಣಿಯವರೆ, ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿ ನನ್ನ ಕ್ಷೇತ್ರದಲ್ಲಿದೆ. ಅದು ಯಾವ ಸ್ಥಿತಿಯಲ್ಲಿದೆಯೆಂದು ಪ್ರತ್ಯೇಕವಾದ ಪ್ರಶ್ನೆಯನ್ನು ಸನ್ಮಾನ್ಯ ಸದಸ್ಯರು ಕೇಳಿದರೆ ಅದರ ಬಗ್ಗೆ ಉತ್ತರ ಕೊಡುತ್ತೇನೆ. ಈಗ ವಿಶ್ವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ನಿಜ. ಯಾವುದೇ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಮೊದಲು ಮಾನ್ಯ ಸದಸ್ಯರು ಅಲ್ಲಿ ಹೋಗಿ ಭೇಟಿ ಮಾಡಿ ನೋಡಿ ಬಂದು ಪ್ರಸ್ತಾಪ ಮಾಡಿದ್ದರೆ ನಿಜವಾಗಿಯೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೆ. ಸದನದಲ್ಲಿ ಲಿಡ್‌ಕರ್ ಲೇಬಲ್ ಹಾಕಿ ವಿಶ್ವ ಎಂದು ಮಾರುತ್ತಿದ್ದಾರೆ ಎಂದು ಹೇಳುವುದು ರೆಸ್ಪಾನ್ಸಿಬಲ್ ಮೆಂಬರ್‌ಗೆ ಚನ್ನಾಗಿ ಕಾಣುವುದಿಲ್ಲ. ಕಾರಣ, ನಾವು ಈ ಒಂದು ಯೋಜನೆ ಹಾಕಿಕೊಂಡಮೇಲೆ ಪ್ರತಿಯೊಂದು ಕ್ಷೇತ್ರದಲ್ಲಿ ಹೋಗಿ ನೋಡಿದ್ದೇವೆ. ಎಲ್ಲಾ ಪ್ರೊಡಕ್ಷನ್ ಸೆಂಟರ್ಸ್‌ಗೆ ಹೋಗಿ ನೋಡಿದ್ದೇವೆ. ನಾನು ಮಾತ್ರ ಅಲ್ಲ, ಪ್ರಧಾನ ಮಂತ್ರಿಯವರ ಕಾರ್ಯದರ್ಶಿ,ಸ್ಕಾಲ್ ಸ್ಕೇಲ್ ಇಂಡಸ್ಟ್ರೀಸ್, ಅವರು ಡೆಲ್ಲಿಯಿಂದ ಬಂದು ಪ್ರೊಡಕ್ಷನ್ ಸೆಂಟರ್ಸ್‌ಗೆ ಹೋಗಿ ನೋಡಿ ಬಂದು ನಮ್ಮ ರಾಜ್ಯಕ್ಕೆ ಮಾತ್ರವಲ್ಲ, ಇಲಾಖೆಗೂ ಅಭಿನಂದನೆ ಸಲ್ಲಿಸಿ ಹೋಗಿದ್ದಾರೆ. ಅದಕ್ಕಾಗಿ ಸನ್ಮಾನ್ಯ ಸದಸ್ಯರಾದ ಪೆರಿಕಲ್ ಮಲ್ಲಪ್ಪನವರಿಗೆ ಎರಡು ಮೂರು ಪ್ರೊಡಕ್ಷನ್ ಸೆಂಟರ್‌ಗಳ ಅಡ್ರಸ್ ಕೊಡುತ್ತೇನೆ. ನಮ್ಮ ಅಧಿಕಾರಿಗಳ ಜೊತೆ ಕಳುಹಿಸಿಕೊಡುತ್ತೇನೆ. ಅವರು ಹೋಗಿ ನೋಡಿಕೊಂಡು ಬಂದು ನಂತರ ಇದನ್ನು ಪ್ರಸ್ತಾಪ ಮಾಡಲಿ.

ವಿಷಯ:- ಸೇಡಂ ನ ಸಾರ್ವಜನಿಕ ಆಸ್ಪತ್ರೆ ಬಗ್ಗೆ .

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 475 (2319)

ಶ್ರೀ ಬಸಂತರೆಡ್ಡಿವೋತಕಪಲ್ಲಿ (ಸೇಡಂ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದ ಹಳೆ ಸಾರ್ವಜನಿಕ ಆಸ್ಪತ್ರೆಯ ಶೌಚಾಲಯ ಸುತ್ತುಗೋಡೆ (ಕಾಂಪೌಂಡ್‌ವಾಲ್)ಇತ್ಯಾದಿ ಬಿದ್ದು ಹೋಗಿ ರೋಗಿಗಳಿಗೆ ತೊಂದರೆಯುಂಟಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ ಶೌಚಾಲಯ ಇಲ್ಲದ ಕಾರಣ, ಆಸ್ಪತ್ರೆಯ ಸುತ್ತಮುತ್ತಲೂ ಮಲ ಮೂತ್ರ ವಿಸರ್ಜಿಸುವುದರಿಂದ ಮಲಿನವಾಗಿ ರೋಗಿಗಳ ರೋಗ ಹರಡಿ ಹೆಚ್ಚಾಗುವುದಿಲ್ಲವೆ?

ಇ ಸುತ್ತುಗೋಡೆ ಬಿದ್ದು ಹೋದ ಕಾರಣ, ದನಕರುಗಳು, ಹಂದಿಗಳು, ಇನ್ನಿತರ ಪ್ರಾಣಿಗಳು ಆಸ್ಪತ್ರೆ ಆವರಣದಲ್ಲಿ ನುಗ್ಗಿ, ಬಂದು ತೊಂದರೆಯಾಗುವುದು ನಿಜವಲ್ಲವೇ ?

ಈ ಇವುಗಳನ್ನು ದುರಸ್ತಿ ಮಾಡಿಸಿ, ರೋಗಿಗಳಿಗೆ ಸ್ವಚ್ಛತೆ ಪರಿಸರ ನಿರ್ಮಿಸುವುದು ಯಾವಾಗ?

ಶ್ರೀ ಜಿ.ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ಹೌದು.

ಆ ಹೌದು, ಆದರೆ ರೋಗಿಗಳ ರೋಗ ಹೆಚ್ಚಾಗಿಲ್ಲ.

ಇ ಹೌದು.